
## ಪದಬಂಧ




**ಎಡದಿಂದ ಬಲಕ್ಕೆ**

1. ಹೊಟ್ಟು ಮಾರಿ ಜೀವಿಸಿದರೂ ಹಿಡಿದ ಪಟ್ಟು ಬಿಡದವಳು 4
3. ಜೋಗುಳ ಹಾಡಲು ಕರೆಸಿದಾಕೆ ಆರಂಭಿಸಿದ್ದು ಕಲಹ 3
4. ಮಾವನ ಮನೆಯಲ್ಲಿ ಯಾರು ಈ ಪರಮ ಕುಳ್ಳನ ಅವತಾರ! 3
6. ಇಷ್ಟು ಭಾರ ಹೊರುವ ಕಾರ್ಯ ಹೆದರಿಕೆ ಹುಟ್ಟಿಸುವಂತಿದೆ 4
8. ಪರಿಚಿತರ ಮನೆಯಿಂದ ಪಡೆದು ತಂದದ್ದು ಈ ಕೃಷ್ಣಪ್ರಿಯ ಸುವಾಸನಾ ಕುಸುಮ 4
10. ನೋಡುಗರೆಲ್ಲ ಒಟ್ಟುಗೂಡುವಾಗ ಸ್ಪರ್ಧೆಯ ಮಧ್ಯದ ಸಮಯ ಬಂದಿತ್ತು 4
12. ರಾಜ್ಯಕ್ಕೆಲ್ಲ ಆಗ ಬಂದಿತ್ತು ಬಿಡುವಿನ ವೇಳೆ 4
16. ಮಾಲೀಕರ ಪತ್ನಿಯದು ಲಕ್ಷ್ಮಿಯದೇ ಹೆಸರು 3
17. ಮೇವಿನ ನಿರಂತರ ಸರಬರಾಜಿಗಾಗಿ ಕೋರಿಕೆ 3
18. ಕಾತರಿಸುತ್ತ ನಿಂತರೆ ಸಿಗುವಂತಹದ್ದಲ್ಲ, ಇದು ಕಾಯಿಪಲ್ಲೆ 4

**ಮೇಲಿನಿಂದ ಕೆಳಕ್ಕೆ**

1. ಹಾದಿಯಲ್ಲಿರುವ ಹಳ್ಳದ ತುಂಬ ಇದೇನು ಶುಭಸೂಚಕ ಬಣ್ಣ? 3
2. ಮಜೂರಿ ಕೊಡುವ ಮೊದಲು ಸಹಿ ಪಡೆವುದು ಅಲ್ಲಿನ ಸಂಪ್ರದಾಯ 3
3. ಕಾಳಜಿ ಕಿಂಚಿತ್ತೂ ಇಲ್ಲ ; ಹಾಗೂ ಮಾಡಬಹುದೇ ಸ್ನಾನ? 3
5. ಹೆಮ್ಮೆಯ ಗರಿಯನ್ನು ಹೊತ್ತಿರುವವರದು ಈ ಭಾರೀ ಶಹರ 3
6. ಭಜನಾ ಕಾರ್ಯಕ್ಕೆ ಸೇರಿರುವ ಮನುಷ್ಯರೆಲ್ಲ ದೇವರಲ್ಲಿ ನಂಬಿಕೆ ಇರುವವರೇ ತಾನೇ? 4
7. ಸಾಧು ಸಂತರನ್ನೆಲ್ಲ ಗುಂಪುಗೂಡಿಸಲು ಈ ಪಾತಾಳ ಲೋಕ ಸರಿಯೇ? 4
8. ವಾರವಾರವೂ ಕಾಣಬಹುದಾದ, ಪಾರವೇ ಇಲ್ಲದ ಸೃಷ್ಟಿ ಕಡಲು ತಾನೇ? 4
9. ಇಂಥ ಅದ್ಭುತ ತಬಲಾ ವಾದನಕ್ಕೆ ಕಾರಣ ಭಾರೀ ತಪಶ್ಶಕ್ತಿ 4
11. ಗೋವುಗಳಿಗೆಲ್ಲ ಕಾವಲು ನಿಲ್ಲಲು ಈ ಹಳ್ಳಿ ಮನುಷ್ಯನೇ ಸರಿ 3
13. ಆ ಜಹಜಿನ ವಿನ್ಯಾಸದಲ್ಲಿರುವ ಚಿತ್ರ ಜಹ್ನು ಮಹರ್ಷಿಯ ಮಗಳದಲ್ಲವೇ? 3
14. ಎಂಥ ಅಳತೆಯನ್ನೂ ಮೀರಿದ್ದೆಂದರೆ ಅಪರಿಮಿತವೇ ಆಗಿರಬೇಕು 3
15. ಕಾರ್ಮಿಕರಿಗೆ ತೀವ್ರ ಅಪಾಯಕರವಾದದ್ದು ಈ ಆಳದ ಹಳ್ಳ 3

### 27—03—2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಉಪವಾಸ 3. ವಿವಾದ 4. ಮಾರೀಚ 6. ಯಕ್ಷಗಾನ 7. ಕಟಕಟೆ 8. ಕಾರಕೂನ 10. ತರಾವರಿ 12. ಪಾರಾವಾರ 14. ಚಾರಿತ್ರಿಕ 16. ತಿರುಕ 17. ಡಾಮರ 18. ರಿಣಭಾರ

**ಮೇಲಿನಿಂದ ಕೆಳಕ್ಕೆ**

1. ಉದಯ 2. ಸಮಾನ 3. ವಿಷಕರ 5. ಚಕೋರ 7. ಕಳಂಕಿತ 9. ನಟವರ 11. ವದಂತಿ 13. ನಿರಾಕಾರ 14. ಚಾಕರಿ 15. ಕಡಾರ


**ಪ್ರಶ್ನಾಂಕಣ**

## ಶನಿ: ಅತ್ಯಧಿಕ ಚಂದ್ರರ ಸೇನಾನಿ ಹೌದೇ?

ನಮ್ಮ ಸೌರವ್ಯೂಹದಲ್ಲಿ ಎಂಟು ಗ್ರಹಗಳಿವೆ. ಅವುಗಳಲ್ಲಿ ಬುಧ ಮತ್ತು ಶುಕ್ರ ಗ್ರಹಗಳನ್ನು ಬಿಟ್ಟು ಉಳಿದೆಲ್ಲ ಗ್ರಹಗಳೂ ವಿವಿಧ ಸಂಖ್ಯೆಯ ಚಂದ್ರರನ್ನು, ಎಂದರೆ ನೈಸರ್ಗಿಕ ಉಪಗ್ರಹಗಳನ್ನು ಪಡೆದಿವೆ: ಭೂಮಿ 1, ಮಂಗಳ 2, ಗುರು 95, ಶನಿ 146, ಯುರೇನಸ್ 28, ನೆಪ್ಚೂನ್ 16 ಮತ್ತು ಕುಬ್ಜ ಗ್ರಹ ಪ್ಲೂಟೊ 5.

ವಸ್ತುಸ್ಥಿತಿ ಏನೆಂದರೆ, ಇದೇ ಕಳೆದ ಮಾರ್ಚ್ 11ರಂದು ಈ ಪಟ್ಟಿಯಲ್ಲಿ ಒಂದು ಮಹತ್ವದ ಬದಲಾವಣೆ ಆಗಿದೆ. ಶನಿಗ್ರಹದ (ಚಿತ್ರ 2) ಚಂದ್ರರ ಒಟ್ಟು ಸಂಖ್ಯೆ 274ಕ್ಕೆ ಏರಿದೆ (ಶನಿಯ ಕೆಲ ಕೆಲ ಉಪಗ್ರಹಗಳನ್ನು ಚಿತ್ರ 1 ಮತ್ತು 3ರಲ್ಲಿ ಗಮನಿಸಿ). ಈ ಬದಲಾವಣೆಯನ್ನು ಅಂತರ ರಾಷ್ಟ್ರೀಯ ಖಗೋಳ ವೈಜ್ಞಾನಿಕ ಒಕ್ಕೂಟ (International Astronomical Union ) ಮಾನ್ಯ ಮಾಡಿದೆ!

ಸ್ಪಷ್ಟವಾಗಿಯೇ, ಶನಿಗ್ರಹದ ಈ ಹೊಸ ಹೆಚ್ಚುವರಿ 128 ಚಂದ್ರರು ಪತ್ತೆಯಾದದ್ದು ಇತ್ತೀಚೆಗಷ್ಟೆ. ಖಗೋಳ ವಿಜ್ಞಾನಿಗಳ ಒಂದು ಅಂತರರಾಷ್ಟ್ರೀಯ ತಂಡ 2019ರಿಂದ 2021ರವರೆಗಿನ ಮೂರು ವರ್ಷಗಳ ಅವಧಿಯಲ್ಲಿ ವಿವಿಧ ದೂರದರ್ಶಕಗಳ ಮೂಲಕ ಶನಿಗ್ರಹದ ಸುತ್ತಲಿನ ಬಾಹ್ಯಾಕಾಶ ಪ್ರದೇಶದ ವೀಕ್ಷಣೆ ನಡೆಸುತ್ತಿದ್ದಾಗ 62 ಹೊಸ ಉಪಗ್ರಹಗಳು ಪತ್ತೆಯಾದವು. ಮತ್ತೆ ಅದೇ ಪ್ರದೇಶದ ಮರುವೀಕ್ಷಣೆಯನ್ನು 2023ರಲ್ಲಿ ಮೂರು ತಿಂಗಳ ಕಾಲ ನಡೆಸಿದಾಗ ಪುನಃ 125 ಚಂದ್ರರು ಪತ್ತೆಯಾಗಿ ಪ್ರಸ್ತುತ ಶನಿ ಗ್ರಹದ ಒಟ್ಟು ಚಂದ್ರರ ಸಂಖ್ಯೆ 274 ಎಂದು ದೃಢವಾಗಿದೆ. ಹಾಗಾಗಿ ಶನಿ ಗ್ರಹ ನಮ್ಮ ಸೌರವ್ಯೂಹದಲ್ಲಿ ಅತ್ಯಧಿಕ ಚಂದ್ರರ ಸೇನಾನಿಯ ಸ್ಥಾನವನ್ನು ಗಳಿಸಿದೆ. ಅತ್ಯಂತ ಸುಂದರ ಕಂಕಣ ವ್ಯೂಹವನ್ನೇ ಅಲ್ಲದೆ (ಚಿತ್ರ 2) ಅತ್ಯಧಿಕ ಚಂದ್ರರ ಸಾಂಗತ್ಯವನ್ನೂ ಪಡೆದಿರುವುದು ಶನಿಗ್ರಹದ ಅನನ್ಯ ವೈಶಿಷ್ಟ್ಯ, ವಿಸ್ಮಯ! 95 ಚಂದ್ರರ ಪರಿವಾರವನ್ನು ಪಡೆದಿರುವ ಗುರು ಗ್ರಹವೂ ಸೇರಿದಂತೆ ಸೌರವ್ಯೂಹದ ಬೇರೆ ಯಾವ ಗ್ರಹವೂ ಎಂದೆಂದಿಗೂ ಶನಿಯ ಈ ಸ್ಥಾನವನ್ನು ಕಸಿಯುವುದು ಸಾಧ್ಯವೇ ಆಗದು ಎಂದು ಖಗೋಳ ವಿಜ್ಞಾನಿಗಳೂ ಭಾವಿಸಿದ್ದಾರೆ!




ಮತ್ತೂ ವಿಶೇಷ ಏನೆಂದರೆ, ಹೊಸದಾಗಿ ಪತ್ತೆಯಾಗಿರುವ ಶನಿಗ್ರಹದ ಎಲ್ಲ 128 ಉಪಗ್ರಹಗಳದೂ ಪುಟ್ಟ ಪುಟ್ಟ ಗಾತ್ರ; ಅನಿಯತ ಆಕಾರ. ಈ ಎಲ್ಲ ಚಂದ್ರರದೂ 2 ರಿಂದ 3 ಕಿಲೋಮೀಟರ್ ಅಡ್ಡಳತೆ; ಬೃಹತ್ ಆಲೂಗೆಡ್ಡೆಗಳಂತೆ ಚಿತ್ರ ವಿಚಿತ್ರ ರೂಪ ಆಕಾರ. ಮಿಲಿಯಾಂತರ ವರ್ಷಗಳ ಹಿಂದೆ ದೊಡ್ಡ ದೊಡ್ಡ ಗಾತ್ರಗಳ ಕೆಲವಾರು ಉಪಗ್ರಹಗಳು ಒಂದಕ್ಕೊಂದು ಡಿಕ್ಕಿ ಹಾಕಿ ಛಿದ್ರಗೊಂಡು ಇಂಥವೆಲ್ಲ ರೂಪ, ಗಾತ್ರಗಳ, ಇಷ್ಟೊಂದು ಸಂಖ್ಯೆಯ ಚಂದ್ರರು ಮೈದಳೆದಿದ್ದಿರಬೇಕು. ಇವೆಲ್ಲ ಚಂದ್ರರೂ ವಿಪರೀತ ದೂರಗಳಲ್ಲಿ, ವೃತ್ತೀಯವಲ್ಲದ ವಿಲಕ್ಷಣ ಪಥಗಳಲ್ಲಿ ಶನಿ ಗ್ರಹವನ್ನು ಪರಿಭ್ರಮಿಸುತ್ತಿವೆ; ಕೆಲವು ಚಂದ್ರರು ಪ್ರದಕ್ಷಿಣವಾಗಿಯೂ, ಉಳಿದವು ಅಪ್ರದಕ್ಷಿಣವಾಗಿಯೂ ಶನಿಯನ್ನು ಸುತ್ತುತ್ತಿವೆ!

**■ ಎನ್. ವಾಸುದೇವ್**